# ನವೋದ್ಯಮಿ ಸಂತೆ ನಾಳೆಯಿಂದ

ಹುಬ್ಬಳ್ಳಿ: ನವೋದ್ಯಮಿ ಸಂಸ್ಥೆಯು ಸಣ್ಣ ಉದ್ಯಮಿದಾರರಿಗಾಗಿ ವಿಶೇಷ ನಾಗರಪಂಚಮಿ ಹಬ್ಬದ ಪ್ರಯುಕ್ತ ನವೋದ್ಯಮಿ ಸಂತೆಯನ್ನು ಆ.10 ರಿಂದ 12ರ ವರೆಗೆ ನಗರದ ವಿದ್ಯಾನಗರದಲ್ಲಿ ಆಯೋಜಿಸಿದೆ. ಉಂಡೆ, ಸಾವಯವ ಪದಾರ್ಥ, ವಿವಿಧ ಬಗೆಯ ತಿಂಡಿ, ಸಿರಿಧಾನ್ಯ, ಕೈಮಗ್ಗದ ಸೀರೆ ಮತ್ತು ಉಡುಪುಗಳು, ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಲಭ್ಯವಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಆ.11 ರಂದು ಬೆಳಗ್ಗೆ 11ಕ್ಕೆ ನಗರದ ಉತ್ತರಾಧಿಮಠದಲ್ಲಿ "ಮಾರಾಟಗಾರರ ಮತ್ತು ಖರೀದಿದಾರರ ಸಂಪರ್ಕ ಸಭೆ" ಆಯೋಜಿಸಿದ್ದು ಆಸಕ್ತ ಖರೀದಿದಾರರು ಭಾಗವಹಿಸಬಹುದು. ನವೋದ್ಯಮಿ ಸಂತೆಯಲ್ಲಿ ಮಳಿಗೆ ಹಾಕಲು ಬಯಸುವವರು 8880964624, 9900053761 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದ್ದಾರೆ.

ಸಂಯುಕ್ತ ಕರ್ನಾಟಕ